ದಿನಾಂಕ: 11.06.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಎದುರುದಾರರ ಪರಃ ಶ್ರೀ ಎಸ್ ಪಿ ಕೆ ವಕೀಲರಿಂದಃ

ಅಪಘಾತ ಆದದ್ದನ್ನು ನಾನು ನೋಡಿಲ್ಲ. ಆದಕಾರಣ ಅಪಘಾತ ಯಾರ ತಪ್ಪಿದಿಂದ ಆಯಿತು ಎನ್ನುವ ಬಗ್ಗೆ ಸ್ವತಃ ಮಾಹಿತಿ ಇಲ್ಲ ಎಂದರೆ ಸರಿ. ಅಪಘಾತ ಆದ ದಿನ ನನಗೆ ಸೇರಿದ ಬೈಕನ್ನು ಭರತ್ ಎನ್ನುವವರು ಚಲಾವಣೆ ಮಾಡುತ್ತಿದ್ದರು. ಸದರಿ ಬೈಕನ್ನು ನಾನು ಭರತ್ಗೆ ಮಾರಾಟ ಮಾಡಿರಲಿಲ್ಲ, ಆತ ಉಪ್ಪಿನಂಗಡಿಗೆ ಹೋಗಿ ಬರುತ್ತೇನೆ ಎಂದು ನನ್ನ ಹತ್ತಿರ ಬೈಕನ್ನು ಪಡೆದಿದ್ದನು.

**2.** ಪ್ರಸ್ತುತ ನನ್ನ ಹತ್ತಿರ ಅಪಘಾತಕ್ಕೊಳಪಟ್ಟ ಬೈಕು ಇಲ್ಲ, ಅದನ್ನು **10** ಸಾವಿರ ರೂ.ಗಳಿಗೆ ಸ್ಕ್ರ್ಯಾಪ್ ಗೆ ಹಾಕಿದ್ದೇನೆ. ನನಗೆ ಸೇರಿದ್ದ ಬೈಕು **2015** ನೇ ಮಾಡೆಲ್ನದ್ದು. ನಾನೇ ಅದರ ಪ್ರಥಮ ಮಾಲಿಕನಾಗಿದ್ದೆನು. ನಾನು ಸದರಿ ಬೈಕನ್ನು **2** ಲಕ್ಷಕ್ಕೂ ಹೆಚ್ಚು ಪಾವತಿಸಿ ಖರೀದಿ ಮಾಡಿದ್ದೇನೆ. **2015** ರ ಸಾಲಿನಲ್ಲಿ ನಾನು ಹೇಳುತ್ತಿರುವ ಬೈಕಿನ ಬೆಲೆ **1** ಲಕ್ಷ **10** ಸಾವಿರ ಎಂದರೆ ಸಾಕ್ಷಿಯು ನಾನು ಸಾಲ ಪಾವತಿಸಿ ಬೈಕು ಪಡೆದಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಬೈಕಿಗೆ ಇಫ್ಕೋ ಟೋಕಿಯೋ ವಿಮಾ ಕಂಪನಿಯ ವಿಮೆ ಇತ್ತು. ನನ್ನ ಬೈಕಿನ ವಿಮಾ ಕಂಪನಿಗೆ ಅಪಘಾತದಿಂದ ಬೈಕು ಜಖಂಗೊಂಡ ಬಗ್ಗೆ ವಿಚಾರ ತಿಳಿಸಿಲ್ಲ.

**3.** ನನ್ನ ಬೈಕನ್ನು ರಮೇಶ್ ಕೋಟೆ ಎನ್ನುವವರು ಸುಪ್ರಿಮ್ ಬಜಾಜ್ ಪುತ್ತೂರಿನಲ್ಲಿ ಸರ್ವೆ ಮಾಡಿದ್ದಾರೆ. ಆಗ ನಮ್ಮ ಬೈಕಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಸರ್ವೇಯರ್ ರವರಿಗೆ ನೀಡಿದ್ದೇನೆ. ನಮ್ಮ ಇನ್ಸ್ಯೂರೆನ್ಸ್ ಕಂಪನಿಯವರಿಂದ ಡ್ಯಾಮೇಜಸ್ ಕೇಳಿದ್ದೇನೆ. ಸಾಕ್ಷಿ ಮುಂದುವರಿದು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ವಿಮಾ ಕಂಪನಿಯವರಿಗೆ ನನ್ನ ವಾಹನ ಅಪಘಾತ ಆದ ಬಗ್ಗೆ ಮಾಹಿತಿ ಇಲ್ಲ.

This is a True Copy of the Court Records Online. Authenticated @ districts.ecourtsindia.com/cnr/KADK310007262023/truecopy/order-4.pdf

www.ecourtsindia.com

4. ನನ್ನ ವಾಹನಕ್ಕೆ ನಾನು ವಿಮಾ ಕಂಪನಿಯವರ ಹತ್ತಿರ ಐಡಿವಿ ಯನ್ನು 44,600/- ರೂ.ಗಳಿಗೆ ಮಾಡಿಸಿದ್ದೇನು. ನಾನು ನನ್ನ ವಾಹನಕ್ಕೆ ಐಡಿವಿ ಕಮ್ಮಿ ಮಾಡಿಸಿದ್ದ ಕಾರಣ ಪರಿಹಾರ ಕಮ್ಮಿ ಬರಬಹುದು ಎಂದು ನಮ್ಮ ವಿಮಾ ಕಂಪನಿಯವರ ಹತ್ತಿರ ಪರಿಹಾರ ಕ್ಲೇಮ್ ಮಾಡಿಲ್ಲ ಎಂದರೆ ಸರಿ. ಸ್ಕ್ರ್ಯಾಪ್ ಗೆ ನನ್ನ ಬೈಕನ್ನು ಹಾಕಿದ ಕಾರಣ ಐಡಿವಿ ಮೊತ್ತದ ಪೈಕಿ 10 ಸಾವಿರ ಹಣ ಬಂದಿದೆ ಎಂದರೆ ಸರಿ. ಅಪಘಾತ ಆದ ನಂತರ ಹಾನಿಗೊಂಡ ಬೈಕಿಗೆ ನಾನು ಯಾವುದೇ ಖರ್ಚು ಮಾಡಿಲ್ಲ. ನನ್ನ ಬೈಕು ಹಳೆಯ ವಾಹನವಾದ ಕಾರಣ ಅದರ ರನ್ನಿಂಗ್ ಕಂಡೀಷನ್ ಸರಿಯಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನಿಪಿ-7 ರಲ್ಲಿ ತೋರಿಸಿರುವಂತಹ ಜಖಂಗಳು ನನ್ನ ಬೈಕಿಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಮೊದಲೇ ನನ್ನ ಬೈಕಿನ ಬಿಡಿಭಾಗಗಳು ರಿಪೇರಿಗೆ ಬಂದಿದ್ದವು ಎಂದರೆ ಸರಿಯಲ್ಲ. ನಾನು ನನ್ನ ಬೈಕಿಗೆ ಸಂಬಂಧಿಸಿದ ಐಡಿವಿ ಮೊತ್ತವನ್ನು ಈಗಾಗಲೇ ನಮ್ಮ ವಿಮಾ ಕಂಪನಿಯಿಂದ ಪಡೆದಿದ್ದು ಅದನ್ನು ಮರೆಮಾಚಿ ಸುಳ್ಳು **ಃಣಣಠಿ://ಟಚುಟ.ರಅಅರಿಟಜ.ಛಿಂಟ/ಟಚುಟ/ಣ**ಅರ್ಜಿ ಸಲ್ಲಿಸಿ **ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಮೊತ್ತ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.**

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು**

This is a True Copy of the Court Records Online. Authenticated @ districts.ecourtsindia.com/cnr/KADK310007262023/truecopy/order-4.pdf

ಎಂ.ವಿ.ಸಿ. ನಂಃ 655/2023, P.W.-1

This is a True Copy of the Court Records Online. Authenticated @ districts.ecourtsindia.com/cnr/KADK310007262023/truecopy/order-4.pdf

www.ecourtsindia.com